ಅಧ್ಯಕ್ಷರು : ಯಾವುದಕ್ಕೂ ಒಂದು ಮಿತಿ ಇರಬೇಕು. ಚರ್ಚೆಗೆ ಅವಕಾಶವಿಲ್ಲ.

(ಗೊಂದಲ)

ಶ್ರೀ ಎಂ.ಟಿ. ಕೃಷ್ಣಪ್ಪ : ಇಲ್ಲಿಯವರೆಗೆ ಲೂಟಿ ಆಗಿರುವ ಬಗ್ಗೆ ಲಿಸ್ಟ್ ಅನ್ನು ಕೊಟ್ಟಿದ್ದೇವೆ.

ಅಧ್ಯಕ್ಷರು : ಮಾನ್ಯ ರೇವಣ್ಣನವರೇ ಆಲೂಗಡ್ಡೆ ಬಗ್ಗೆ ಹೇಳಿ.

ಶ್ರೀ ಹೆಚ್.ಡಿ. ರೇವಣ್ಣ : ಚಿಕ್ಕನಾಯಕನಹಳ್ಳಿ ಬಗ್ಗೆ ಹೇಳುತ್ತೇನೆ.

ಅಧ್ಯಕ್ಷರು : ಆಯಿತು.

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ಮರಳು ದಂಧೆ ಬಗ್ಗೆ ನಮ್ಮದು ಒಂದು ಮನವಿ ಇದೆ.

ಅಧ್ಯಕ್ಷರು : ಮರಳು ದಂಧೆ ಎಲ್ಲಾ ಒಂದೇ concept.

ಶ್ರೀ ಹೆಚ್.ಸಿ.ಬಾಲಕೃಷ್ಣ : ಇದೇ ಬೇರೆ, ನೀವೇ ನಮಗೆ subject ಕೊಟ್ಟಿದ್ದೀರಿ.

5. ರಾಜ್ಯದ ಚಿಕ್ಕನಾಯಕನಹಳ್ಳಿ–ತಿಪಟೂರು–ಗಂಡಸಿ–ದುದ್ದ ರಸ್ತೆ ನಿರ್ಮಾಣ ಕಾರ್ಯ ಸ್ಥಗಿತಗೊಂಡಿರುವುದರಿಂದ ಉಂಟಾಗಿರುವ ತೊಂದರೆಯ ಬಗ್ಗೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ (ಅರಸೀಕೆರೆ) : ಅಧ್ಯಕ್ಷರೆ, ಚಿಕ್ಕನಾಯಕನಹಳ್ಳಿ –ತಿಪಟೂರು–ದುದ್ದ–ಹಾಸನ Toll collection– ಆಧಾರದ ಮೇಲೆ ಅಭಿಜಿತ್ ಕಂಪನಿ ಅಂಥ ಒಂದು ಕಂಪನಿಯವರು ಆ ರೋಡ್‌ನ ಟೆಂಡರ್‌ನ್ನು ಗುತ್ತಿಗೆಗೆ ತೆಗೆದುಕೊಂಡರು. 30 ವರ್ಷಗಳ ಕಾಲ ಕರವನ್ನು ವಸೂಲಿ ಮಾಡಿಕೊಂಡು, ಹಣವನ್ನು ವಸೂಲಿ ಮಾಡಿಕೊಂಡು ಆ ರೋಡ್ ಅನ್ನು ನಾವು ಮಾಡಿ ಕೊಡುತ್ತೇವೆಂದು ಹೇಳಿ ಸರ್ಕಾರದ ಜೊತೆ MOU ಮಾಡಿಕೊಂಡು ಒಂದು ರಸ್ತೆಯನ್ನು ಅವರು ತೆಗೆದುಕೊಂಡರು. ಅವತ್ತು ಆ ರಸ್ತೆಯನ್ನು ತೆಗೆದುಕೊಳ್ಳಬೇಕಾರೆ ಸಾವಿರಾರು ಲಾರಿಗಳು ಮೈನಿಂಗ್ ಚಿಕ್ಕನಾಯನಹಳ್ಳಿ, ಹೊಸಪೇಟೆ ಭಾಗದಿಂದ ಕಳ್ಳದಂಧೆ ಮಾಡಿ ಲಾರಿಯಲ್ಲಿ Iron ore ತುಂಬಿಕೊಂಡು ಅಲ್ಲಿಂದ ಪಾಸ್ ಆಗುತ್ತಿದ್ದವು. ಇದೇ ರೀತಿ ನಡೆಯುತ್ತದೆಂದು ತಿಳಿದುಕೊಂಡು ಆ ಕಂಪನಿಯವರು ಬಂದು ತೆಗೆದುಕೊಂಡರು.Agreement

ಆಯಿತು. ಕೆಲಸವನ್ನು start ಮಾಡಿದರು. ಬಹಳ risk ನಲ್ಲಿ ಕೆಲಸ start ಮಾಡಿ ಇವತ್ತು ಎಲ್ಲವನ್ನೂ ಕಿತ್ತು ಹಾಕಿದ್ದಾರೆ.cemtral ನಲ್ಲಿ ಕಂಪನಿಯ ಮಾಲೀಕ ಕಲ್ಲಿದ್ದಲು ಹಗರಣಕ್ಕೆ ಸಿಕ್ಕಿ ಹಾಕಿಕೊಂಡಿದ್ದಾನೆ. ಇವತ್ತು ಕೆಲಸವನ್ನು ಕೈ ಬಿಟ್ಟಿದ್ದಾನೆ. ಅಲ್ಲಿಗೆ ಮನುಷ್ಯರು ಹೋಗುವ ಹಾಗೆ ಇಲ್ಲ. ದಯವಿಟ್ಟು, ಸಚಿವರು ಅಲ್ಲಿಗೆ ಬರಬೇಕು ತಮಗೆ ಗೊತ್ತಾಗುತ್ತದೆ. ನಾವು ಜನರಿಂದ ಬಯ್ಯಿಸಿಕೊಂಡು ಕರ್ಮಕಾಂಡವನ್ನ ಅನುಭವಿಸುತ್ತಿದ್ದೇವೆ. ಹಾಸನ, ಅರಸೀಕೆರೆ, ಚಿಕ್ಕನಾಯಕನಹಳ್ಳಿಯಿಂದ ತಿಪಟೂರು, ದುದ್ದ, ಹಾಸನಕ್ಕೆ ಹೊಗಬೇಕಾದರೆ ಅದು ರಾಜ್ಯ ಹೆದ್ದಾರಿ ರಸ್ತೆ ಅದನ್ನು ಕಿತ್ತುಬಿಟ್ಟು ಒಂದು ಕಡೆ ಮಣ್ಣು ಹೊಡೆದಿದ್ದಾರೆ, ಒಂದು ಕಡೆ ಕಾಂಕ್ರೀಟ್ ಹಾಕಿದ್ದಾರೆ, ಒಂದು ಕಡೆ ಸೇತುವೆ ಕಿತ್ತು ಹಾಕಿದ್ದಾರೆ. ಅಸಹ್ಯವಾಗಿ ಮಾಡಿ ಕೈಬಿಟ್ಟಿದ್ದಾರೆ. ಕಂಪನಿಯವರು ಎಲ್ಲಾ ವಸ್ತುಗಳನ್ನು ಖಾಲಿ ಮಾಡಿ ಹೋಗುವ stage ನಲ್ಲಿ ಇದ್ದಾರೆ. ಅವನು CBI ಗೆ ಸಿಕ್ಕಿ ಹಾಕಿಕೊಂಡಿದ್ದಾನೆ. ಸರ್ಕಾರದ ಭಾಗ 39% ಏನು ಕೊಡಬೇಕಾಗಿತ್ತು, ಆ 39% ಅನ್ನು ನನಗೆ ಕೊಟ್ಟಿಲ್ಲವೆಂದು ಸರ್ಕಾರದ ಮೇಲೆ ಹೊರಿಸುತ್ತಿದ್ದಾನೆ. ನನಗೆ ಕೊಡದೇ ಇರುವುದರಿಂದ ನಾನು ಈ ಕೆಲಸವನ್ನು ಮಾಡಲು ಆಗಿಲ್ಲವೆಂದು ಹೇಳಿ ಸರ್ಕಾರದ ಮೇಲೆ ಕೇಸ್ ಹಾಕುವುದಕ್ಕೆ ಹೊರಟಿದ್ದಾನೆ. ಅವನಿಗೆ ನೀವು 39% ಕೊಟ್ಟರೆ ತಕ್ಷಣ ಅವನು ಅದನ್ನು ತೆಗೆದುಕೊಂಡು ಪತ್ತೆ ಇಲ್ಲದ ರೀತಿಯಲ್ಲಿ ಹೋಗುತ್ತಾನೆ. 39% ಅನ್ನು ಅವನಿಗೆ ಕೊಡಬೇಡಿ. ಯಾವುದೇ ಕಾರಣದಿಂದ re-tender ಮಾಡಿ ಅವನದು ಏನು ಮುಟ್ಟುಗೋಲು ಹಾಕಿಕೊಳ್ಳಬೇಕೋ ಅದನ್ನು ತಕ್ಷಣವೇ ಹಾಕಿಕೊಳ್ಳಬೇಕು. ಚಿಕ್ಕನಾಯಕನಹಳ್ಳಿ ಕಡೆ ಹೋಗುವವರಿಗೆ ಏನೂ ಕಷ್ಟವಿಲ್ಲ. ತಿಪಟೂರು, ನನಗೆ, ಮಾನ್ಯ ರೇವಣ್ಣನವರಿಗೆ, ಮಾನ್ಯ ಪ್ರಕಾಶರ್‌ರವರಿಗೆ ಇಷ್ಟೂ ಜನಕ್ಕೆ ಅರಸೀಕೆರೆಯಿಂದ ಹಾಸನಕ್ಕೆ ಹೋಗಬೇಕಾದರೆ ಎರಡು ಗಂಟೆ ಬೇಕು. 175 ಕಿ.ಮೀ. ಬಳಸಿ ಬರುತ್ತಿದ್ದೇವೆ. 3 ವರ್ಷದಿಂದ ಬಳಸುತ್ತಿದ್ದೇವೆ, ಚನ್ನರಾಯಪಟ್ಟಣಕ್ಕೆ ಬಂದು ಚನ್ನರಾಯಪಟ್ಟಣದಿಂದ ಅರಸೀಕೆರೆಗೆ ಹೋಗುತ್ತೇವೆ. 45 ಕಿ.ಮೀ. ಬದಲಿಗೆ 150 ಕಿ.ಮೀ. ಬಳಸುತ್ತಿದ್ದೇವೆ. ದಯವಿಟ್ಟು ಈ ಬಗ್ಗೆ ಕೂಡಲೇ action ತೆಗೆದುಕೊಂಡು re-tender ಕರೆಯಬೇಕು. M.L.A. ಗಳ ಮೀಟಿಂಗ್ ಕರೆಯಿರಿ. ನಮಗೆ ನ್ಯಾಯ ಒದಗಿಸಿಕೊಡಬೇಕು. ಇಲ್ಲವಾದರೆ ಅಲ್ಲಿ ನಮ್ಮ ಮಾನ–ಮರ್ಯಾದೆ ಉಳಿಯುವುದಿಲ್ಲ.

ಅಧ್ಯಕ್ಷರು : ಆಯಿತು. ಮೀಟಿಂಗ್ ಕರೆಯಿರಿ

(ಗೊಂದಲ)

ಅಧ್ಯಕ್ಷರು : ನಿಮ್ಮ ಹೆಸರು ಇಲ್ಲ.

ಶ್ರೀ ಹೆಚ್.ಎಸ್.ಪ್ರಕಾಶ್ : ನನ್ನ ಊರಿನಲ್ಲಿ ಹೋಗಿರುವ ರಸ್ತೆ ಅದು.

ಅಧ್ಯಕ್ಷರು : ಅವರು ಪ್ರಸ್ತಾಪ ಮಾಡಿದ್ದರೆ.

ಶ್ರೀ ಹೆಚ್.ಡಿ.ರೇವಣ್ಣ (ಹೊಳೆನರಸೀಪುರ): ಮಾನ್ಯ ಅಧ್ಯಕ್ಷರೆ, ದಿನಾಂಕ 5-1-2012 ರಂದು ಕೆಲಸ ಪ್ರಾರಂಭವಾಗಿದೆ. ದಿನಾಂಕ 4-1-2014ಕ್ಕೆ ಮುಗಿಯಬೇಕು. ನಾವು 214 ಕೋಟಿ ರೂಪಾಯಿಗಳಲ್ಲಿ 140 ರೂಪಾಯಿಗಳ invest ಮಾಡಿದ ಮೇಲೆ 39% ಕೊಡಬೇಕೆಂದು ಇದೆ. ಆದರೆ ಅವನು ಇದುವರೆಗೆ 10-12 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾನೆ. 2 ವರ್ಷದಿಂದ ಕೇವಲ 12 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾನೆ. ಸುಮಾರು 100 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇನೆಂದು ನಿಮ್ಮ ಹತ್ತಿರ ಲೆಕ್ಕ ತೋರಿಸುತ್ತಿದ್ದಾನೆ. Physically, ಅವನು ಖರ್ಚು ಮಾಡಿರುವುದು ಕೇವಲ 15 ಕೋಟಿ ರೂಪಾಯಿಗಳು. ತಾವು ದಯಮಾಡಿ ಇಂಜಿನಿಯರ್ ಕಡೆಯಿಂದ ಕೇಳಿ. ರೈಲ್ವೆ ಬ್ರಿಡ್ಜ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ರೈಲ್ವೆ ಬ್ರಿಡ್ಜ್‌ಗೆ ಈಗಾಗಲೇ clearance ಕೊಟ್ಟಿದ್ದಾರೆ. ಎರಡಕ್ಕೂ ಅನುಮತಿ ಕೊಟ್ಟಿದ್ದಾರೆ. ಆದರೆ ಅವನು ಬೇಕು ಎಂದು ಒಂದು ಅರ್ಜಿಯನ್ನು ಬರೆದುಕೊಂಡು ಇಟ್ಟುಕೊಂಡಿದ್ದಾನೆ. ಬೆರೆ ಕಡೆ Forest clearance ಆಗಿದೆ. ಮರ ಕಡಿದು ಆಗಿದೆ. ಎಲ್ಲಾ ರಸ್ತೆಯನ್ನು ಅಗೆದು ಬಿಟ್ಟಿದ್ದಾರೆ. ರಸ್ತೆಯಲ್ಲಿ ಓಡಾಡುವುದಕ್ಕೆ ಆಗುತ್ತಿಲ್ಲ. ಶಿವಲಿಂಗೇಗೌಡರು ಹೇಳಿದಂತೆ ಇವತ್ತು 40 ಕಿ.ಮೀ. ಗೆ 75 ಕಿ.ಮೀ. ಪ್ರವಾಸ ಮಾಡಬೇಕಾಗಿದೆ. ಜನ ದಿನ ಬಯ್ಯುತ್ತಿದ್ದಾರೆ. ಆದ್ದರಿಂದ ದಯಮಾಡಿ, 10 ಕೋಟಿ ಹಣವನ್ನು KRDCL ನಿಗಮಕ್ಕೆ ಕೊಟ್ಟು ಜೆಲ್ಲಿ ರಸ್ತೆಯನ್ನು ಮಾಡಿಸಿಕೊಡಿ. ಆಮೇಲೆ re-tender ಕರೆಯಿರಿ. ಮಳೆಗಾಲ ಬಂದರೆ ಆ ಜಾಗದಲ್ಲಿ ಲಾರಿಗಳು, ಬಸ್ಸುಗಳು ಹೋಗುವುದಕ್ಕೆ ಆಗುವುದಿಲ. ಶಾಲಾ-ಮಕ್ಕಳಿಗೆ ಬಹಳ ತೊಂದರೆ ಆಗಿದೆ. ದಯಮಾಡಿ, ಕೂಡಲೇ ನಿಮ್ಮ ರಸ್ತೆ ನಿಗಮದಿಂದ ಕೆಲಸ ಮಾಡಿಸಿಕೊಡಿ. ಟೆಂಡರ್ ಕರೆಯಲು 3 ತಿಂಗಳು ಬೇಕಾಗುತ್ತದೆ. ಮಳೆಗಾಲ ಪ್ರಾರಂಭವಾದರೆ ತೊಂದರೆ ಆಗುತ್ತದೆ. ಕೂಡಲೇ ಇದಕ್ಕೆ 10 ಕೋಟಿ ರೂಪಾಯಿಗಳನ್ನೂ ಕೊಟ್ಟು ರಸ್ತೆ ನಿಗಮದಿಂದ ಕೆಲಸ ಮಾಡಿಸಿ

ಅರಸೀಕೆರೆಯಿಂದ ತಿಪಟೂರಿನವರೆಗೆ ಓಡಾಡಲು ಮಾಡಿಕೊಡಿ ಎಂದು ಮನವಿ ಮಾಡುತ್ತೇನೆ.

ಅಧ್ಯಕ್ಷರು : ಉತ್ತರ ಹೇಳಿ.

ಡಾ. ಹೆಚ್.ಸಿ.ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು): ಮಾನ್ಯ ಅಧ್ಯಕ್ಷರೆ, ಚಿಕ್ಕನಾಯಕನಹಳ್ಳಿ–ತಿಪಟೂರು–ಹಾಸನ (ಭಾಗಶಃ ಜಿಲ್ಲಾ ಮುಖ್ಯ ರಸ್ತೆ ಮತ್ತು ರಾಜ್ಯ ಹೆದ್ದಾರಿ) ರಸ್ತೆ ಒಟ್ಟು 76.961 ಕಿ.ಮೀ. ಉದ್ದದ ರಸ್ತೆಯ 9.00 ಮೀ. ಅಗಲಕ್ಕೆ ಅಭಿವೃದ್ಧಿಯನ್ನು ಸಾರ್ವಜನಿಕ–ಖಾಸಗಿ ಸಹಭಾಗಿ ಬಿ.ಒ.ಟಿ – ವಿ.ಜಿ.ಎಫ್ (ಶುಲ್ಕ) ಆಧಾರದಲ್ಲಿ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದವತಿಯಿಂದ ಕೈಗೊಳ್ಳಲಾಗುತ್ತದೆ.

ಸದರಿ ಕಾಮಗಾರಿಯ ರೂ. 241.76 ಕೋಟಿಗಳ ಪ್ರಸ್ತಾವನೆಗೆ ಭಾರತ ಸರ್ಕಾರವು ಪತ್ರ ಸಂಖ್ಯೆ: F.N.3A/3/2009-PPP ದಿನಾಂಕ:03–08–2009 ರಲ್ಲಿ ಅನುಮೋದನೆ ನೀಡಿರುತ್ತದೆ.

4 ಸಲ ಕರೆದ ಟೆಂಡರ್‌ಗಳ ಕರೆಗೆ ಯಾವುದೇ ಗುತ್ತಿಗೆದಾರರು ಭಾಗವಹಿಸಿರುವುದಿಲ್ಲ. ದಿನಾಂಕ: 09–07–2010 ರಂದು ನೀಡಿದ 5ನೇ ಟೆಂಡರ್ ಕರೆಗೆ ಪ್ರತಿಕ್ರಿಯಿಸಿ ಮೆ॥ ಅಭಿಜಿತ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಟ್ ರವರು ಮಾತ್ರ ಭಾಗವಹಿಸಿದ್ದು, ಇವರ ವಿ.ಜಿ.ಎಫ್. ಪ್ರೈಸ್ ಬಿಡ್ ಶೇಕಡ 39 ರಷ್ಟಿನ ಟೆಂಡರ್ ಗೆ ಸಕಾರದ ಆದೇಶದ ಸಂಖ್ಯೆ: ಲೋಇ 134 ಇಎಪಿ 2010 ಬೆಂಗಳೂರು ದಿನಾಂಕ: 28–04–2011 ರಲ್ಲಿ ಅನುಮೋದನೆ ನೀಡಲಾಗಿರುತ್ತದೆ. ವಿ.ಜಿ.ಎಫ್. ನ ಶೇಕಡ 39 ರಲ್ಲಿ ಕೇಂದ್ರ ಸರ್ಕಾರವು ಶೇಕಡ 39 ರಲ್ಲಿ ಕೇಂದ್ರ ಶೇಕಡ 20 ರಷ್ಟು ಹಾಗೂ ಉಳಿದ ಶೇಕಡ 19 ರಷ್ಟು ರಾಜ್ಯ ಸರ್ಕಾರವು ಭರಿಸುತ್ತದೆ. ಉಳಿದ ಶೇಕಡ 61 ರಷ್ಟನ್ನು ರಿಯಾಯಿತಿದಾರರು ಭರಿಸುತ್ತಾರೆ.

ದಿನಾಂಕ: 03–06–2011 ರಂದು ರಿಯಾಯಿತಿದಾರರೊಂದಿಗೆ ಕರಾರನ್ನು ಮಾಡಿಕೊಳ್ಳಲಾಗಿದ್ದು, ದಿನಾಂಕ: 05–01–2012 ರಂದು ಕಾಮಗಾರಿಯನ್ನು ಪ್ರಾರಂಭಿಸಿ 24 ತಿಂಗಳುಗಳ ಕಾಲಾವಧಿಯಲ್ಲಿ ಅಂದರೆ ದಿನಾಂಕ: 04–01–2014 ಕ್ಕೆ ಕಾಮಗಾರಿಯನ್ನು ಪೂರ್ಣಗೊಳಿಸಬೇಕಾಗಿರುತ್ತದೆ. ದಿನಾಂಕ: 09–01–2012 ರಲ್ಲಿ 63.521 ಕಿ.ಮೀ. ಉದ್ದದ ರಸ್ತೆಯನ್ನು ರಿಯಾಯಿತಿದಾರರಿಗೆ ಹಸ್ತಾಂತರಿಸಲಾಯಿತು.

ತುಮಕೂರು ಜಿಲ್ಲಾ ವ್ಯಾಪ್ತಿಯ ತಿಪಟೂರು ಬೈಪಾಸ್‌ಗಾಗಿ ಹಾಗೂ ಚಿಕ್ಕನಾಯಕನಹಳ್ಳಿ–ತಿಪಟೂರು ಮಧ್ಯಭಾಗದಲ್ಲಿ ಅತಿಯಾದ ತಿರುವುಗಳನ್ನು ಸರಿಪಡಿಸುವ ಸಲುವಾಗಿ ಹೊಸ ಮಾರ್ಗವನ್ನು ಯೋಜನಾ ವರದಿಯಲ್ಲಿ ಗುರುತಿಸಿದ್ದು, ಸದರಿ ಭಾಗಕ್ಕೆ ಭೂಸ್ವಾಧೀನ ಪಡಿಸಿಕೊಳ್ಳಲು ಪ್ರಸ್ತಾವನೆಯನ್ನು ಜುಲೈ–2011 ರಲ್ಲಿ ಲೋಕೋಪಯೋಗಿ ಇಲಾಖೆಯ ಮುಖಾಂತರ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲಾಗಿದ್ದು, 4(1) ರ ಅಧಿಸೂಚನೆಯನ್ನು ದಿನಾಂಕ : 16–03–2012 ರಂದು ಹೊರಡಿಸಲಾಗಿದೆ. 6(1) ರ ಅಧಿಸೂಚನೆಯನ್ನು ದಿನಾಂಕ : 28–03–2013 ರಂದು ಹೊರಡಿಸಲಾಗಿದ್ದು, ಅವಾರ್ಡ್ ಪ್ರಕ್ರಿಯೆಗಳು ಚಾಲನೆಯಲ್ಲಿದೆ.

ಹಾಸನ ಜಿಲ್ಲೆಯ ವ್ಯಾಪ್ತಿಯಲ್ಲಿ ದುದ್ದದ ಹತ್ತಿರ ಇರುವಂತಹ ರೈಲ್ವೆ ಲೆವೆಲ್ ಕ್ರಾಸಿಂಗ್ ಬಳಿ ಮೇಲ್ಸೇತುವೆ ನಿರ್ಮಿಸುವ ಸಲುವಾಗಿ ರೈಲ್ವೆ ಇಲಾಖೆಯ ಸಮನ್ವಯದೊಂದಿಗೆ ಮಾರ್ಗವನ್ನು ಅಂತಿಮಗೊಳಿಸಿ 1.40 ಕಿ.ಮಿ. ಉದ್ದದ ರಸ್ತೆಗೆ ಅಗತ್ಯ ಭೂಸ್ವಾದೀನಕ್ಕೆ ಪ್ರಸ್ತಾವನೆಯನ್ನು 31–03–2012 ರಲ್ಲಿ ಲೋಕೋಪಯೋಗಿ ಇಲಾಖೆಯ ಮುಖಾಂತರ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲಾಗಿದ್ದು, 4(1) ರ ಅಧಿಸೂಚನೆಯನ್ನು ಹೊರಡಿಸಬೇಕಾಗಿರುತ್ತದೆ.

ಈ ಯೋಜನೆಗೆ ಸಂಬಂಧಪಟ್ಟಂತೆ ತಿಪಟೂರಿನ ಹತ್ತಿರ ಹಾಗೂ ದುದ್ದ ಹತ್ತಿರ ಕಡೆಗಳಲ್ಲಿ ರೈಲ್ವೆ ಮೇಲ್ಸೇತುವೆಗಳನ್ನು ನಿರ್ಮಿಸಬೇಕಾಗಿದ್ದು ಈ ಪ್ರಸ್ತಾವನೆಗಳಿಗೆ ರೈಲ್ವೆ ಇಲಾಖೆಯಿಂದ ಅನುಮೋದನೆ ಪಡೆದು ಮುಂದಿನ ವಿನ್ಯಾಸಗಳನ್ನು ಅಂತಿಮಗೊಳಿಸಿ ಕಾಮಗಾರಿ ಕೈಗೊಳ್ಳುವ ಸಲುವಾಗಿ ರಿಯಾಯಿತಿದಾರಿಗೆ ದಿನಾಂಕ: 24–05–2013 ರಂದು ಅನುಮೋದಿತ ನಕ್ಷೆಗಳನ್ನು ಒದಗಿಸಲಾಗಿದೆ.

ಈಗಾಗಲೇ ಹಸ್ತಾಂತರಿಸಲಾಗಿರುವ 63.521 ಕಿ.ಮೀ. ಉದ್ದದ ರಸ್ತೆಯಲ್ಲಿ 60.621 ಕಿ.ಮೀ. ಉದ್ದಕ್ಕೆ ರಸ್ತೆಬದಿಯ ಮರಗಳನ್ನು ಅರಣ್ಯ ಇಲಾಖೆಯಿಂದ ತೆರವುಮಾಡಿರುತ್ತಾರೆ. ಉಳಿದ 2.90 ಕಿ.ಮೀ. ಉದ್ದದ ರಸ್ತೆಯಲ್ಲಿ ಮಾನ್ಯ ರಾಜ್ಯ ಉಚ್ಚನ್ಯಾಯಾಲಯದಲ್ಲಿ ರಸ್ತೆ ಬದಿ ಮರಗಳನ್ನು ತೆರೆವುಗೊಳಿಸುವ ಸಂಬಂಧವಾಗಿ ದಾವಾ ಸಂಖ್ಯೆ: WP 210814/2011 ರಲ್ಲಿ ಸಾರ್ವಜನಿಕ ಹಿತಾಸಕ್ತಿಯ ಅರ್ಜಿ ದಾಖಲಾಗಿರುವುದರಿಂದ ಮರಗಳನ್ನು ತೆರವುಗೊಳಿಸಲಾಗಿರುವುದಿಲ್ಲ.

ರಿಯಾಯಿತಿದಾರರು ಕೆಲಸ ಪ್ರಾರಂಭಿಸಿ ಆಗಸ್ಟ್ – 2012 ರವರೆಗೆ ಪೂರ್ಣಮಟ್ಟದ ಯಂತ್ರೋಪಕರಣಗಳ ಹಾಗೂ ಕೆಲಸಗಾರರನ್ನು ಬಳಸಿಕೊಂಡು ಕೆಲಸ ನಿರ್ವಹಿಸಿ, ಶೇಕಡ 2.97 ರಷ್ಟು ಪ್ರಗತಿಯನ್ನು ಸಾಧಿಸಿ, ತದನಂತರ ಕಾಮಗಾರಿಯ ಪ್ರಗತಿಯನ್ನು ಕಡಿತಗೊಳಿಸಿ ಇದ್ದಂತಹ ಯಂತ್ರೋಪಕರಣ ಹಾಗೂ ಕೆಲಸಗಾರರನ್ನು ಕಡಿಮೆಗೊಳಿಸುತ್ತಾ ಬಂದು ಅಂತಿಮವಾಗಿ ಕೆಲಸವನ್ನು ನಿಲ್ಲಿಸಿರುತ್ತಾರೆ. ಹಾಗೂ ಹಾಲಿ ಇರುವಂತಹ ರಸ್ತೆ ಹಾಗೂ ಕೆಲಸ ನಿರ್ವಹಿಸುವ ಭಾಗಗಳಲ್ಲಿ ವಾಹನ ಸಂಚಾರಕ್ಕೆ ಅನುವುಮಾಡಿಕೊಡಲಾಗಿರುವ ಸೇವಾ ರಸ್ತೆ ನಿರ್ವಹಣೆಯನ್ನು ಸಮರ್ಪಕವಾಗಿ ಮಾಡುತ್ತಿರುವುದಿಲ್ಲ.

ರಿಯಾಯಿತಿದಾರರು ತಮ್ಮ ಭಾಗದ ಮೊತ್ತದಲ್ಲಿ ರೂ. 140.02 ಕೋಟಿಗಳ ಹಣವನ್ನು ಈ ಯೋಜನೆಗಾಗಿ ಇದುವರೆಗೆ ಬಳಸಿ, ಕಾಮಗಾರಿಯನ್ನು ಮುಂದುವರೆಸುವ ಸಲುವಾಗಿ ವಿ.ಜಿ.ಎಫ್. ಹಣವನ್ನು ಬಿಡುಗಡೆ ಮಾಡಲು ಕೋರಿರುತ್ತಾರೆ ಹಾಗೂ ಪ್ರಸ್ತುತ ಕಾಮಗಾರಿಯನ್ನು ನಿಲ್ಲಿಸಿರುತ್ತಾರೆ.

ರಿಯಾಯಿತಿದಾರರು ಕರಾರಿನನುಸಾರ ಮೂರು ಮೈಲುಗಳ ಪೈಕಿ ಮೊದಲನೆಯ ಮೈಲುಗಲ್ಲಿನಲ್ಲಿ 15.40 ಕಿ.ಮೀ. ಹಾಗೂ ಎರಡನೆಯ ಮೈಲುಗಲ್ಲಿನಲ್ಲಿ 38.48 ಕಿ.ಮೀ. ರಸ್ತೆ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕಾಗಿತ್ತು. ಆದರೆ ಇಲ್ಲಿಯವರೆಗೆ 2.28 ಕಿ.ಮೀ. ಉದ್ದದ ರಸ್ತೆಯನ್ನು ಮಾತ್ರ ಪೂರ್ಣಗೊಳಿಸಿರುವುದರಿಂದ ವಿ.ಜಿ.ಎಫ್. ಭಾಗದ ಹಣವನ್ನು ಈ ವರೆಗೆ ಬಿಡುಗಡೆಮಾಡಿರುವುದಿಲ್ಲ.

ಈ ಬಗ್ಗೆ ರಿಯಾಯಿತಿದಾರರಿಗೆ ಕಾಮಗಾರಿ ಪ್ರಗತಿಯನ್ನು ನೀಡಲು ಹಾಗೂ ರಸ್ತೆ ನಿರ್ವಹಣೆಯನ್ನು ಸಮರ್ಪಕವಾಗಿ ಮಾಡಲು ಎಚ್ಚರಿಕೆ ನೀಡಲಾಗಿದೆ, ಆದರೂ ರಸ್ತೆ ನಿರ್ಮಾಣದಲ್ಲಿ ಯಾವುದೇ ಪ್ರಗತಿಯು ಕಂಡುಬರುತ್ತಿಲ್ಲವಾದ್ದರಿಂದ, ಈ ಸಂಬಂಧವಾಗಿ, ರಿಯಾಯಿತಿದಾರರ ಮೇಲೆ ಕರಾರಿನ್ವಯ ಕಾನೂನುರೀತ್ಯಾ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು.

ಶ್ರೀ ಹೆಚ್.ಡಿ.ರೇವಣ್ಣ : ಓದುವುದು ಬೇಡ.

ಡಾ: ಹೆಚ್.ಸಿ.ಮಹದೇವಪ್ಪ : ರೆಕಾರ್ಡ್‌ಗೆ ಹೋಗುವುದು ಬೇಡವೇ?

ಅಧ್ಯಕ್ಷರು : Record ಗೆ ಹೋಗುತ್ತದೆ.Details ಕೊಟ್ಟಿದ್ದೇವೆ. ಮಾನ್ಯ ಶಿವಲಿಂಗೇಗೌಡರು ಮತ್ತು ರೇವಣ್ಣನವರು ಹೇಳಿದ್ದಾರೆ.

ಡಾ: ಹೆಚ್.ಸಿ.ಮಹದೇವಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಗೌರವಾನ್ವಿತ ಶಿವಲಿಂಗೇಗೌಡರು ಮತ್ತು ಮಾನ್ಯ ರೇವಣ್ಣನವರು ರೂಲ್ 69ರ ಅಡಿಯಲ್ಲಿ ಚಿಕ್ಕನಾಯಕನಹಳ್ಳಿ, ತಿಪಟೂರು, ಹಾಸನ ರಸ್ತೆಯ ಪರಿಸ್ಥಿತಿ ಬಗ್ಗೆ ಹೇಳಿದ್ದಾರೆ, ಅದು ಸತ್ಯ ಇದೆ. ಆ Contractor ರಸ್ತೆಯನ್ನು ಅಗೆದು ಸರಿಯಾಗಿ ಎರಡೂವರೆ–ಮೂರು ಕಿ.ಮೀ. ರಸ್ತೆ ಮಾಡದೆ 140 ಕೋಟಿ ರೂಪಾಯಿಗಳ ಹಣ ಕೊಡಿ ಎಂದು ಕೇಳಿದ್ದಾನೆ.

ಅಧ್ಯಕ್ಷರು : ಇದುವರೆಗೆ ಅವನಿಗೆ ಹಣ ಕೊಟ್ಟಿಲ್ಲವೇ.

ಡಾ: ಹೆಚ್.ಸಿ.ಮಹದೇವಪ್ಪ : ಅವನಿಗೆ ಹಣ ಕೊಟ್ಟಿಲ್ಲ. 39% ನಲ್ಲಿ ಕೇಂದ್ರ 20% ಕೊಡುತ್ತದೆ. ರಾಜ್ಯ 19 ಕೊಡುತ್ತದೆ, ಉಳಿದಿದ್ದನ್ನು Private Party ಅವರು ಕೊಡುತ್ತಾರೆ. ನಮಗೆ ಅವನು undertaking ಕೊಟ್ಟಿದ್ದಾನೆ. 16 ಕೋಟಿ ರೂಪಾಯಿಗಳನ್ನು ನಮ್ಮ ಹತ್ತಿರ deposit ಮಾಡಿರುತ್ತಾನೆ. ಅವನು ಕೊಟ್ಟು ಮಾಡಲಿಲ್ಲವೆಂದರೆ Cabinet ನಲ್ಲಿ ಇಟ್ಟು ಅದನ್ನು cancel ಮಾಡಿ ಅವನು ಕೊಟ್ಟ ಹಣದಲ್ಲೇ ನಾವು ರಿಪೇರಿ ಕೆಲಸವನ್ನು ಮಾಡಬೇಕು.Already ನಾನು Chief Engineer, MD ಯವರನ್ನು ಕರೆದು ಚರ್ಚೆ ಮಾಡಿದ್ದೇನೆ. ಅವನ ಮೇಲೆ ಕ್ರಮ ತೆಗೆದುಕೊಳ್ಳುವುದು ಒಂದು ಭಾಗವಾದರೆ. ರಸ್ತೆಯಲ್ಲಿ Motorable condition ಮಾಡುವುದು ಹೇಗೆ? ಅದಕ್ಕೆ ಒಂದು ಪರಿಹಾರ ಮಾಡಿ, ಮಳೆಗಾಲ ಬರುತ್ತದೆ, ಸಾರ್ವಜನಿಕರಿಗೆ ಅನಾನುಕೂಲವಾಗುತ್ತದೆ, ಕೆಲವು ಕಡೆ ಅದಕ್ಕೆ ಪ್ರತಿಭಟನೆ ಮಾಡಿದ್ದಾರೆಂದು ಜಿಲ್ಲಾಧಿಕಾರಿಗಳು ನನಗೆ ಹೇಳಿದ್ದಾರೆ. ಅವನು ಕೆಲಸ ಮಾಡದ ಹಾಗೆ ಟಿಮ್ರ್ಸಿನೇಟ್ ಮಾಡುವುದಕ್ಕೆ ಕಾನೂನು ವ್ಯಾಪ್ತಿಯಲ್ಲಿ ಹಾಗೂ agreement ನಲ್ಲಿ ಏನೇನಿದೆ, ಅದನ್ನು ನೋಡಿ ಮಾಡುತ್ತೇವೆ. Motorable condition ಮಾಡುವುದರಲ್ಲಿ ಸಾರ್ವಜನಿಕರಿಗೆ ತೊಂದರೆಯಾಗದ ರೀತಿಯಲ್ಲಿ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೋಳ್ಳತ್ತೇವೆ.

ಅಧ್ಯಕ್ಷರು : ಅವರು Meeting ಕರೆಯಲು ಹೇಳಿದ್ದಾರೆ. ತಾವು Meeting ಕರೆದು ಅವರ ಜೊತೆ ಚರ್ಚೆ ಮಾಡಿ.

ಡಾ: ಹೆಚ್.ಸಿ.ಮಹದೇವಪ್ಪ : ನಾವು ಅವರನ್ನು ಕರೆದು ಚರ್ಚೆ ಮಾಡಿ ಸಾರ್ವಜನಿಕರಿಗೆ ತೊಂದರೆ ಆಗದ ರೀತಿಯಲ್ಲಿ Motorable condition ಅನ್ನು ತಾತ್ಕಾಲಿಕವಾಗಿ ಮಾಡುವುದು. It is already an approved project. ಅದನ್ನು ಮಾಡುವುದಕ್ಕೆ ಸರ್ಕಾರದ ವತಿಯಿಂದ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

6. ವಿಷಯ : ಕುಣಿಗಲ್ ತಾಲ್ಲೂಕಿನ ಲೋಕೋಪಯೋಗಿ ಇಲಾಖೆಯ ಉಪವಿಭಾಗದಿಂದ ಮರಳು ವಿಲೇವಾರಿಯಲ್ಲಿ ಅಕ್ರಮ ನಡೆದಿರುವ ಬಗ್ಗೆ.

ಡಾ: ಹೆಚ್.ಸಿ. ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು):- ಮಾನ್ಯ ಅಧ್ಯಕ್ಷರೆ, ತಹಶೀಲ್ದಾರ್, ಕುಣಿಗಲ್ ಇವರು, ಕುಣಿಗಲ್ ತಾಲ್ಲೂಕಿನ ಹುಲಿಯೂರುದುರ್ಗ ಹೋಬಳಿಯ ಕೊಡವತ್ತಿ, ಹನುಮಂತನಗರ, ತೊರಬೊಮ್ಮನಹಳ್ಳಿಯ ಬಳಿ ಅನಧಿಕೃತವಾಗಿ ಶೇಖರಣೆ ಮಾಡಿರುವ ಸುಮಾರು ಒಟ್ಟು 18890 ಮೆ.ಟನ್. (10494.45 ಘ.ಮೀ) ಮರಳನ್ನು ಮುಟ್ಟುಗೋಲು ಹಾಕಿಕೊಂಡು ಸ್ವಾಧೀನಕ್ಕೆ ತೆಗೆದುಕೊಂಡಿರುವ ಮರಳನ್ನು ಲೋಕೋಪಯೋಗಿ ಉಪವಿಭಾಗ, ಕುಣಿಗಲ್ ಇವರಿಗೆ ಹಸ್ತಾಂತರಿಸಲಾಗಿರುತ್ತದೆ.

ಮೇಲ್ಕಾಣಿಸಿದ ಮರಳನ್ನು ವಿಲೇವಾರಿಯಾಗುವತನಕ ರಕ್ಷಿಸಲು ಗೃಹ ರಕ್ಷಕ ದಳದವರನ್ನು ನೇಮಿಸಿಕೊಳ್ಳುವಂತೆ ಜಿಲ್ಲಾ ಮರಳು ಉಸ್ತುವಾರಿ ಸಮಿತಿ ಅಧ್ಯಕ್ಷರಾದ ಜಿಲ್ಲಾಧಿಕಾರಿಗಳು ಸೂಚಿಸಿದಂತೆ ಪೊಲೀಸ್ ಮಹಾನಿರ್ದೇಶಕರು, ಗೃಹ ರಕ್ಷಕ ದಳ ಮತ್ತು ಪೌರ ರಕ್ಷಣಾ ಕೇಂದ್ರ ಕಚೇರಿ, ಬೆಂಗಳೂರು ಇವರಿಗೆ ಕಾರ್ಯಪಾಲಕ ಇಂಜಿನಿಯರ್ ತುಮಕೂರು ವಿಭಾಗ ಇವರು ಗೃಹ ರಕ್ಷಕ ಸಿಬ್ಬಂದಿಯನ್ನು ಒದಗಿಸುವಂತೆ ದಿನಾಂಕ 20.10.2012 ರಲ್ಲಿ ಕೊರಿರುತ್ತಾರೆ.

ಮರಳಿನ ಸುರಕ್ಷತೆಯು ವಾಸ್ತವಿಕವಾಗಿ ತುಂಬಾ ಕಷ್ಟದಾಯಕವಾದ ಕೆಲಸವಾಗಿದ್ದು, ಇಲಾಖೆಯ ಶಾಖಾಧಿಕಾರಿಗಳು ಮತ್ತು ರಸ್ತೆ ಗ್ಯಾಂಗ್ ಸಿಬ್ಬಂದಿಯನ್ನು ಮರಳು ಸುರಕ್ಷತೆಗಾಗಿ ನಿಯೋಜಿಸಲಾಗಿರುತ್ತದೆ. ಮತ್ತು ಮರಳು ಮಾಫಿಯಾದವರಿಂದ ತೀವ್ರ ತರವಾದ ಗಲಾಟೆಗಳು ಹಾಗೂ ಪ್ರಾಣ ಬೆದರಿಕೆ ಕರೆಗಳು ಬರುತ್ತಿರುವ ಹಿನ್ನೆಲೆಯಲ್ಲಿ ಹಾಗೂ ಮರಳು ಸುರಕ್ಷೆ ಕಾರ್ಯಕ್ಕಾಗಿ ತೊರೆಬೊಮ್ಮನಹಳ್ಳಿಯಲ್ಲಿ ನೇಮಿಸಿದ್ದ ಶ್ರೀ ಬೋರೇಗೌಡ, ಗ್ಯಾಂಗ್‌ಮನ್ ರವರಿಗೆ ದಿನಾಂಕಃ 28-10-2012 ರಂದು ಮರಳು ಮಾಫಿಯಾದವರು ತೀವ್ರ ಹಲ್ಲೆ ನಡೆಸಿರುವ ಬಗ್ಗೆ ವರದಿ ಮಾಡುತ್ತಾ, ಸಂಗ್ರಹಣೆ ಮಾಡಿರುವ ಮರಳು